ಸೆಲೆಬ್ರಿಟಿ

■ ಹನಿ

## ಆಸ್ಕರ್ ಹೊಸ್ತಿಲಲ್ಲಿ..



**ಈ**ಕೆ ಹುಟ್ಟಿದ್ದು ಕೋಲ್ಕತ್ತಾದಲ್ಲಿ; ಆದರೆ ಹೆಸರು ಬಾಂಬೆ ಜಯಶ್ರೀ. ಏಕೆಂದರೆ ಬೆಳೆದದ್ದು ಮುಂಬೈಯಲ್ಲಿ. ಸಂಗೀತ ವೃತ್ತಿಯಲ್ಲಿ ಇನ್ನಷ್ಟು ಎತ್ತರಕ್ಕೆ ಏರಿದ್ದು ಚೆನ್ನೈಯಲ್ಲಿ. ಸಾಮಾಜಿಕ ಸೇವೆಯಲ್ಲಿ ತೊಡಗಿಸಿಕೊಂಡಾಗ ಗುರುತಿಸಿದ್ದು ಬೆಂಗಳೂರನ್ನು. ಒಟ್ಟಾರೆ ಈ ಬಾಂಬೆ ಜಯಶ್ರೀ ಇಡೀ ಇಂಡಿಯಾದ ಮಗಳು! ಇದೀಗ 85ನೇ ಅಕಾಡೆಮಿ (ಆಸ್ಕರ್) ಪ್ರಶಸ್ತಿಗೆ ಈಕೆ ಬರೆದು, ಹಾಡಿದ ಜೋಗುಳವೊಂದು ನಾಮಕರಣಗೊಂಡು ಈಕೆ ಇಡೀ ಇಂಡಿಯಾಕ್ಕೇ ಹೆಮ್ಮೆ ತಂದಿದ್ದಾರೆ. ಆಂಗ್ ಲೀ ನಿರ್ದೇಶನದ 'ಲೈಫ್ ಆಫ್ ಪೈ' ಚಿತ್ರದಲ್ಲಿ ಈಕೆ ಹಾಡಿರುವ ಜೋಗುಳ, 'ಅತ್ಯುತ್ತಮ ಒರಿಜಿನಲ್ ಹಾಡು' ಎನ್ನುವ ವಿಭಾಗ ದಲ್ಲಿ ಆಸ್ಕರ್ ಪ್ರಶಸ್ತಿಗೆ ನಾಮಕರಣಗೊಂಡಿದೆ. ಆದರೆ ಆಸ್ಕರ್ ಘೋಷಣೆ ಯಾಗುವ ಮುನ್ನವೇ ಕೇರಳದಿಂದ 'ಈ ಹಾಡು ಒರಿಜಿನಲ್ ಅಲ್ಲ' ಎಂಬ ಅಪಸ್ವರದ ಘೋಷಣೆ ಮೊಳಗಿದೆ! ಇರಯಿಮ್ಮನ್ ಥಂಪಿ ಎಂಬವರು ತಾವು ಮಲಯಾಳಂನಲ್ಲಿ ರಚಿಸಿದ 'ಓಮನದಿಂಕಲ್ ಕಿಡಾವೊ' ಎಂಬ ಜೋಗುಳದ ಹಾಡನ್ನೇ ಜಯಶ್ರೀ ಕದ್ದು ತಮಿಳಿನಲ್ಲಿ ಬರೆದಿದ್ದಾರೆ ಎಂದು ಆರೋಪಿಸಿದ್ದಾರೆ. ಆಸ್ಕರ್ ಏನಾಗುತ್ತದೋ ಗೊತ್ತಿಲ್ಲ!

ಹಾಗೆಂದು ಈ ವಿವಾದದಿಂದ ಬಾಂಬೆ ಜಯಶ್ರೀಯವರ ಕೀರ್ತಿಗೇನೂ ಕುಂದು ಬಂದಿಲ್ಲ. ಏಕೆಂದರೆ ಕರ್ನಾಟಕ ಸಂಗೀತ ಕ್ಷೇತ್ರದಲ್ಲಿ ಆಕೆಯ ಹೆಸರು ಈಗಾಗಲೆ ವಿಶ್ವಖ್ಯಾತಿ ಹೊಂದಿದೆ. ಸುಮಾರು 20 ದೇಶಗಳಲ್ಲಿ ಈಗಾಗಲೆ ಹಲವು ಕಾರ್ಯಕ್ರಮಗಳನ್ನು ಕೊಟ್ಟಿರುವ ಜಯಶ್ರೀ, ಭಾರತದಲ್ಲೂ ಕಾರ್ಯ ಕ್ರಮ ನೀಡದ ಯಾವ ನಗರಗಳೂ ಇಲ್ಲ. ತಮಿಳು ಸಿನಿಮಾ ರಂಗದಲ್ಲಿ ಹಿನ್ನೆಲೆ ಗಾಯಕಿಯಾಗಿ ಸದ್ಯಕ್ಕೆ ಬೇಡಿಕೆಯಲ್ಲಿರುವ ಜಯಶ್ರೀ, ಇಳಯರಾಜ, ರೆಹಮಾನ್ ಮುಂತಾದ ಸಂಗೀತ ನಿರ್ದೇಶಕರ ಸಾರಥ್ಯದಲ್ಲೂ ಹಾಡಿದ್ದಾರೆ. ತಮಿಳಿನ ನಟಿ ರೇವತಿ ನಿರ್ದೇಶನದ ಎರಡು ಸಿನಿಮಾಗಳಿಗೆ ಸಂಗೀತ ನಿರ್ದೇಶನ ವನ್ನೂ ನೀಡಿದ್ದಾರೆ. ಹಿಂದಿ, ಮಲಯಾಳಂ ಸಿನಿಮಾಗಳಲ್ಲೂ ಇವರು ಹಾಡಿದ್ದಿದೆ.

ಬಾಲ್ಯದಲ್ಲಿ ತಂದೆ ಎನ್.ಎನ್.ಸುಬ್ರಹ್ಮಣ್ಯಂ ಮತ್ತು ತಾಯಿ ಸೀತಾ ಅವರೇ ಸಂಗೀತ ಗುರುಗಳು. ಬಳಿಕ ಟಿ.ಆರ್.ಬಾಲಮಣಿಯವರ ಬಳಿ ಹತ್ತು ವರ್ಷಗಳ ತರಬೇತಿ. ಚೆನ್ನೈಗೆ ಬಂದ ಬಳಿಕ 'ವಯೊಲಿನ್ ಮಾಂತ್ರಿಕ' ಲಾಲ್‌ಗುಡಿ ಜಯ ರಾಮನ್ ಪಟ್ಟಶಿಷ್ಯೆಯಾದರು. ವಯೊಲಿನ್, ವೀಣೆ ಮತ್ತು ಹಿಂದೂಸ್ತಾನಿ ಗಾಯನದಲ್ಲೂ ಈಕೆ ಚತುರೆ. ಮುಂಬೈಯಲ್ಲಿ ಬಿ.ಕಾಂ ಪದವಿ ಮುಗಿಸಿ, ದೆಹಲಿಯ ಗಂಧರ್ವ ಮಹಾವಿದ್ಯಾಲಯದಲ್ಲಿ ಸಂಗೀತದಲ್ಲಿ ಡಿಪ್ಲೊಮಾ ಪಡೆದಿದ್ದಾರೆ. ತಮ್ಮ ಹೆಸರನ್ನು 'ಜಯಶ್ರೀ ರಾಮನಾಥ್' ಎಂದು ಗಂಡನ ಹೆಸರಿನ ಜತೆಗೇ ಸೇರಿಸಿ ಬರೆದರೂ ಇವರನ್ನು 'ಬಾಂಬೆ' ಬಿಟ್ಟುಕೊಡುತ್ತಿಲ್ಲ! 'ಆಸ್ಕರ್' ಬಿಟ್ಟುಬಿಡಬಹುದೆ.. ಎನ್ನುವುದನ್ನು ಕಾದು ನೋಡಬೇಕು. ●

---

## 'ಮಹಾ ಸುಳ್ಳುಗಾರ'



**ಅಂ**ತರರಾಷ್ಟ್ರೀಯ ಸೈಕ್ಲಿಂಗ್ ರೇಸ್‌ನ 'ಅನಭಿಷಿಕ್ತ ದೊರೆ'ಯಾಗಿದ್ದ ಅಮೆರಿಕದ ಲ್ಯಾನ್ಸ್ ಆರ್ಮ್‌ಸ್ಟ್ರಾಂಗ್ ತಪ್ಪೊಪ್ಪಿಕೊಂಡಿದ್ದಾನೆ. ಓಪ್ರಾ ವಿನ್‌ಫ್ರೇಯ ಟಿ.ವಿ ಷೋನಲ್ಲಿ 'ಹೌದು, ಪ್ರತಿಷ್ಠಿತ ಟೂರ್ ಡಿ ಫ್ರಾನ್ಸ್ ಸೈಕ್ಲಿಂಗ್ ರೇಸ್‌ನಲ್ಲಿ ಕಳೆದ ಏಳು ಸಲವೂ ನಾನು ಉದ್ದೀಪನ ಮದ್ದು ಸೇವಿಸಿಯೇ ಗೆದ್ದದ್ದು' ಎಂದಾತ ಹೇಳಿದ್ದಾನೆ. ಕಳೆದ ಅಕ್ಟೋಬರ್‌ನಲ್ಲೇ ಉದ್ದೀಪನಾ ಮದ್ದು ಪರೀಕ್ಷೆಯಲ್ಲಿ ಸಿಕ್ಕಿ ಬಿದ್ದಿದ್ದರೂ ಈವರೆಗೆ ಆತ ಅದನ್ನು ಒಪ್ಪಿಕೊಂಡಿರಲಿಲ್ಲ. ಆ ಹಿನ್ನೆಲೆಯಲ್ಲಿ ಈ ತಪ್ಪೊಪ್ಪಿಗೆ ಮಹತ್ವದ ಘಟನೆ.

"ಹಾಗೆಂದು ನನಗೆ ಅಂತರರಾಷ್ಟ್ರೀಯ ಸ್ಪರ್ಧೆಗಳಲ್ಲಿ ಭಾಗವಹಿಸದಂತೆ ಮರಣ ದಂಡನೆ (ಜೀವಾವಧಿ ನಿಷೇಧ) ನೀಡಿರುವುದು ಸರಿಯಲ್ಲ. ನಾನು ಮತ್ತೆ ಸ್ಪರ್ಧಿಸಬೇಕು. ನನ್ನ ಶಿಕ್ಷೆಯನ್ನು ಕಡಿಮೆ ಮಾಡಿ. ಈ ಹಿಂದೆ ಉದ್ದೀಪನ ಮದ್ದು ಸೇವಿಸಿ ಸ್ಪರ್ಧಿಸಿ ಸಿಕ್ಕು ಬಿದ್ದ ನನ್ನ ಕೆಲವು ಸಹ ಸೈಕ್ಲಿಸ್ಟ್‌ಗಳಿಗೆ ಕಡಿಮೆ ಶಿಕ್ಷೆ ಕೊಟ್ಟಿಲ್ಲವೆ?" ಎಂದೂ ಆತ ಪ್ರಶ್ನಿಸಿದ್ದಾನೆ.

ಮೊದಲ ಬಾರಿಗೆ ಉದ್ದೀಪನಾ ಮದ್ದು ಪರೀಕ್ಷೆ ಘಟಕವು ಈತನನ್ನು ಅಪರಾಧಿ ಎಂದು ಘೋಷಿಸಿದಾಗ ಆತನ 14ರ ಹರೆಯದ ಮಗ ಅದನ್ನು ನಂಬಿರಲಿಲ್ಲವಂತೆ. ಆತ ಅಪ್ಪನನ್ನು ಸದಾ ಸಮರ್ಥಿಸುತ್ತಲೇ ಇದ್ದನಂತೆ. ಕಳೆದ ವಾರ ಓಪ್ರಾ ಷೋನಲ್ಲಿ ಕಣ್ಣೀರಿಟ್ಟ ಲ್ಯಾನ್ಸ್, 'ಮಗನೇ ನನ್ನನ್ನು ಸಮರ್ಥಿಸಿ ಕೊಳ್ಳಬೇಡ, ನಾನು ಮದ್ದು ಸೇವಿಸಿದ್ದು ನಿಜ' ಎಂದಾಗ ಟಿ.ವಿ ಮುಂದೆ ಕುಳಿತ ಆತನ ಸಹಸ್ರಾರು ಅಭಿಮಾನಿಗಳೂ ಕಣ್ಣೀರಿಟ್ಟಿದ್ದರು. ಆದರೆ ಮದ್ದು ಪರೀಕ್ಷಾ ಘಟಕದ ಅಧಿಕಾರಿಗಳು ಈತನ ಕಣ್ಣೀರನ್ನು ನಂಬುತ್ತಿಲ್ಲ. 'ಇಷ್ಟೆಲ್ಲ ಕಟ್ಟುನಿಟ್ಟಿನ ಪರೀಕ್ಷೆಗಳಲ್ಲಿ ಕಣ್ಣು ತಪ್ಪಿಸಿ ಸ್ಪರ್ಧೆಯಲ್ಲಿ ಭಾಗವಹಿಸಬೇಕಿದ್ದರೆ ಅದು ಲ್ಯಾನ್ಸ್ ಒಬ್ಬನಿಂದಲೇ ಸಾಧ್ಯವಿಲ್ಲ. ಆತನ ಸಲಹೆಗಾರರು, ಮದ್ದು ಪೂರೈಕೆ ಮಾಡಿದ ವರು, ಸಿಕ್ಕಿಬೀಳದಂತೆ ರಕ್ಷಣೆ ನೀಡಿದ ಅಧಿಕಾರಿಗಳ ಹೆಸರನ್ನೂ ಬಹಿರಂಗಪಡಿ ಸಲಿ. ಬಳಿಕ ಆಜೀವ ನಿಷೇಧ ಕಡಿಮೆ ಮಾಡುವ ಪ್ರಶ್ನೆ..' ಎಂದಿದ್ದಾರೆ ಅವರು!

'ನೈಕ್' ಸಹಿತ ಪ್ರತಿಷ್ಠಿತ ಕ್ರೀಡಾ ಕಂಪೆನಿಗಳ ಜಾಹೀರಾತುಗಳಿಂದ ಲ್ಯಾನ್ಸ್ ಹೊರತಳ್ಳಲ್ಪಟ್ಟಿದ್ದಾನೆ. ಕ್ಯಾನ್ಸರ್ ವಿರುದ್ಧ ಹೋರಾಡಿ ಸೈಕ್ಲಿಸ್ಟ್ ಆದ ಆತನೇ ಸ್ಥಾಪಿಸಿದ್ದ 'ಲಿವರ್‌ಸ್ಟ್ರಾಂಗ್ ಕ್ಯಾನ್ಸರ್ ಚಾರಿಟಿ'ಯ ಚೇರ್‌ಮನ್, ಡೈರೆಕ್ಟರ್ ಸ್ಥಾನಕ್ಕೂ ರಾಜೀನಾಮೆ ನೀಡಬೇಕಾಯಿತು. ಈಗ ಜೀವಾವಧಿ ನಿಷೇಧ ಶಿಕ್ಷೆ ಕಡಿಮೆ ಆಗಬಹುದೆ? ●

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65